# ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1074 (1001) |
| 02. | ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ. ಬಿ.ಜಿ.ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 03. | ಉತ್ತರಿಸುವ ದಿನಾಂಕ | : | 22-09-2022 |
| 04. | ಉತ್ತರಿಸುವ ಸಚಿವರು. | : | ಗೃಹ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಅಪ್ರಾಪ್ತ, ಪ್ರಾಪ್ತ ಹಾಗೂ ಗೃಹಿಣಿಯರು ನಾಪತ್ತೆಯಾಗುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ: | ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ | ಬಂದಿದ್ದಲ್ಲಿ, ಜಿಲ್ಲೆಗಳಲ್ಲಿ ನಾಪತ್ತೆಯಾದ ಅಪ್ರಾಪ್ತ, ಪ್ರಾಪ್ತ ಹಾಗೂ ಗೃಹಿಣಿಯರ ಸಂಖ್ಯೆ ಎಷ್ಟು: | **ಅನುಬಂಧ-1** ದಲ್ಲಿ ಒದಗಿಸಲಾಗಿದೆ. |
| ಇ | ನಾಪತ್ತೆಯಾಗಲು ಕಾರಣವೇನು: ನಾಪತ್ತೆಯಾದವರ ಪತ್ತೆ ಹಚ್ಚಲು ದೂರು ಕೊಟ್ಟರೂ ಸಹ ಪತ್ತೆ ಹಚ್ಚುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣವೇನು: ಇದಕ್ಕೆ ಹೊಣೆಗಾರರು ಯಾರು: ಜಿಲ್ಲೆಗಳ ಪೊಲೀಸರು ಯಾವ ಕ್ರಮ ಕೈಗೊಂಡಿದ್ದಾರೆ? (ವಿವರ ನೀಡುವುದು). | ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಅಪ್ರಾಪ್ತರು, ಪ್ರಾಪ್ತರು ಮತ್ತು ಗೃಹಿಣಿಯರು ತಮ್ಮ ಮನೆಯಲ್ಲಿ ಜಗಳ ಮಾಡಿಕೊಂಡು, ತಮ್ಮ ಸ್ವಂತ ಇಚ್ಛೆಯಿಂದ ಗೆಳೆಯರೊಂದಿಗೆ ಹಾಗೂ ಕೆಲ ಗೃಹಿಣಿಯರು ಮನೆಯವರಿಂದ ಬೇಸರಗೊಂಡು ನಾಪತ್ತೆಯಾಗಿರುತ್ತಾರೆ.<br><br>ನಾಪತ್ತೆಯ ಕುರಿತು ಮಾಹಿತಿ/ದೂರುಗಳು ಠಾಣೆಗೆ ಬಂದ ಕೂಡಲೇ ಪ್ರಕರಣದಾಖಲಿಸಿಕೊಂಡು ಪತ್ತೆಗಾಗಿ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ನಾಪತ್ತೆಯಾದ ಅಪ್ರಾಪ್ತರು, ಪ್ರಾಪ್ತರು ಮತ್ತು ಗೃಹಿಣಿಯರು ರವರುಗಳನ್ನು ಪತ್ತೆ ಹಚ್ಚಿರುವ ಹಾಗೂ ಇನ್ನೂ ನಾಪತ್ತೆ ಇರುವವರ ಪತ್ತೆಗೆ ಕೈಗೊಂಡ ಕ್ರಮಗಳ ಮಾಹಿತಿಯನ್ನು **ಅನುಬಂಧ-2** ರಲ್ಲಿ ಒದಗಿಸಲಾಗಿದೆ. |

**HD 60 PCQ 2022**

**(ಆರಗ ಜ್ಞಾನೇಂದ್ರ)**
ಗೃಹ ಸಚಿವರು.

## ಅನುಬಂಧ-1

ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ನಾಪತ್ತೆಯಾದ ಅಪ್ರಾಪ್ತರು, ಪ್ರಾಪ್ತರು ಮತ್ತು ಗೃಹಿಣಿಯರ ವಿವರಗಳು ಈ ಕೆಳಕಂಡಂತಿದೆ.

### ಕಲಬುರಗಿ ಜಿಲ್ಲೆ

| ವರ್ಷ | ನಾಪತ್ತೆಯಾದ ಅಪ್ರಾಪ್ತರು | ನಾಪತ್ತೆಯಾದ ಪ್ರಾಪ್ತರು | ನಾಪತ್ತೆಯಾದ ಗೃಹಿಣಿಯರು |
|---|---|---|---|
| 2019 | 17 | 08 | 01 |
| 2020 | 10 | 06 | 02' |
| 2021 | 27 | 07 | 03 |
| 2022 | 21 | 04 | 00 |

### ಯಾದಗಿರಿ ಜಿಲ್ಲೆ

| ವರ್ಷ | ನಾಪತ್ತೆಯಾದ ಅಪ್ರಾಪ್ತರು | ನಾಪತ್ತೆಯಾದ ಪ್ರಾಪ್ತರು | ನಾಪತ್ತೆಯಾದ ಗೃಹಿಣಿಯರು |
|---|---|---|---|
| 2019 | 14 | 38 | 20 |
| 2020 | 07 | 44 | 10 |
| 2021 | 07 | 56 | 37 |
| 2022 ಆಗಸ್ಟ 31ರವರೆಗೆ | 05 | 35 | 27 |

## ಅನುಬಂಧ-2

## ನಾಪತ್ತೆಯಾದವರಲ್ಲಿ ಪತ್ತೆ ಹಚ್ಚಿದವರ ವಿವರಗಳು.

### ಕಲಬುರಗಿ ಜಿಲ್ಲೆ.

| ವರ್ಷ | ಪತ್ತೆಯಾದ ಅಪ್ರಾಪ್ತರು | ಪತ್ತೆಯಾದ ಪ್ರಾಪ್ತರು | ಪತ್ತೆಯಾದ ಗೃಹಿಣಿಯರು |
|---|---|---|---|
| 2019 | 17 | 08 | 01 |
| 2020 | 10 | 06 | 02 |
| 2021 | 24 | 07 | 03 |
| 2022 ಆಗಸ್ಟ್ ರವರೆಗೆ | 08 | 00 | 00 |

### ಯಾದಗಿರಿ ಜಿಲ್ಲೆ.

| ವರ್ಷ | ಪತ್ತೆಯಾದ ಅಪ್ರಾಪ್ತರು | ಪತ್ತೆಯಾದ ಪ್ರಾಪ್ತರು | ಪತ್ತೆಯಾದ ಗೃಹಿಣಿಯರು |
|---|---|---|---|
| 2019 | 14 | 30 | 20 |
| 2020 | 07 | 38 | 08 |
| 2021 | 07 | 48 | 35 |
| 2022 ಆಗಸ್ಟ್ ರವರೆಗೆ | 04 | 28 | 23 |

### ಪತ್ತೆ ಹಚ್ಚಲು ಕೈಗೊಂಡಿರುವ ಕ್ರಮಗಳು.

- ನಾಪತ್ತೆಯಾದವರ ಪತ್ತೆಗಾಗಿ ಅವರ ಭಾವ ಚಿತ್ರಗಳನ್ನು ದೂರದರ್ಶನ ಕೇಂದ್ರಗಳಾದ ನವದೆಹಲಿ, ಮುಂಬಾಯಿ ಮತ್ತು ಬೆಂಗಳೂರು ರವರಲ್ಲಿ ಪತ್ತೆ ಹಚ್ಚಲು ಪ್ರಸಾರ ಮಾಡಲು ಕಳುಹಿಸಿಕೊಡಲಾಗುತ್ತಿದೆ. ದಿನ ಪತ್ರಿಕೆಗಳಲ್ಲಿ ಭಾವಚಿತ್ರ ಸಮೇತ ಮಾಹಿತಿ ಪ್ರಕಟಿಸಲಾಗುತ್ತಿದೆ.
- ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೆ ಕಾಣೆಯಾದವರ ಭಾವಚಿತ್ರ ಸಮೇತ ಮಾಹಿತಿಯನ್ನು ಈ ಮೇಲ್ ಮುಖಾಂತರ ಕಳುಹಿಸಿ ಯಾವುದಾದರು ಅಪರಿಚಿತ ಶವದೊಂದಿಗೆ ಹೋಲಿಕೆ ಮಾಡಿ ಮಾಹಿತಿಸಿಕ್ಕಲ್ಲಿ ತಿಳಿಸುವಂತೆ ಕೋರಲಾಗುತ್ತಿದೆ.
- ಪತ್ತೆ ಕುರಿತು, ಪೊಲೀಸ್ ಸಿಬ್ಬಂದಿಯವರನ್ನು ನೇಮಿಸಿ ಪತ್ತೆ ಹಚ್ಚಲು ಕ್ರಮಕೈಗೊಳ್ಳಲಾಗುತ್ತಿದೆ.